ಸಾಂಪ್ರದಾಯಿಕ ಬೌಲಿಂಗ್ ಅನ್ನು ಪರಿಣಾಮಕಾರಿ ಮಾಡಿರುವುದಲ್ಲದೆ, ವೇಗವಾಗಿ ಟ್ವೆಂಟಿ–20 ಕ್ರಿಕೆಟ್ ಜಗತ್ತಿನಲ್ಲಿ ಸ್ಪರ್ಧಾತ್ಮಕವಾಗಿ ಉಳಿಯಲು ಬೌಲರ್‌ಗಳು ನಿರಂತರವಾಗಿ ಹೊಂದಿಕೊಳ್ಳಲು ನೆರವಾಗಿವೆ.

ನಿಧಾನವಾದ ಚೆಂಡು ಯಾರ್ಕರ್ ಮತ್ತು ಕಟ್ಟರ್‌ನಂತಹ ವ್ಯತ್ಯಾಸಗಳ ಮೇಲೆ ಒತ್ತು ನೀಡಲಾಗಿದೆ. ಸಾಂಪ್ರದಾಯಿಕವಾಗಿ, ಸ್ಪಿನ್ನರ್‌ಗಳು ಆಟದ ದೀರ್ಘ ಸ್ವರೂಪಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗುತ್ತಾರೆ ಎನ್ನುವ ನಿರೀಕ್ಷೆಯಿತ್ತು. ಆದರೆ ಐಪಿಎಲ್‌ನಲ್ಲಿ ಸ್ಪಿನ್ನರ್‌ಗಳು ರನ್ ನಿಯಂತ್ರಿಸುವಲ್ಲಿ ಮತ್ತು ವೇಗವಾಗಿ ವಿಕೆಟ್‌ಗಳನ್ನು ಕಬಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಬಹುದು ಎಂದು ತೋರಿಸಿದೆ. ಇದರ ಪರಿಣಾಮವಾಗಿ ಕ್ಯಾರಮ್ ಬಾಲ್ ಮತ್ತು ನಕಲ್ ಬಾಲ್ ಹೊಸ ಸ್ಪಿನ್ ಬೌಲಿಂಗ್ ತಂತ್ರಗಳು ಹೊರಹೊಮ್ಮಿವೆ.

## ಪ್ರಭಾವ ಪಸರಿಸಿದ ಟೂರ್ನಿ

ಐಪಿಎಲ್ ಜಾಗತಿಕವಾಗಿ ಉಳಿದ ಎಲ್ಲ ಕ್ರೀಡೆಗಳ ಮೇಲೆ ಪರಿಣಾಮ ಬೀರಿದೆ. ಆಸ್ಟ್ರೇಲಿಯಾದ ಬಿಗ್ ಬ್ಯಾಷ್ ಲೀಗ್, ವೆಸ್ಟ್ ಇಂಡೀಸ್‌ನಲ್ಲಿ ಕೆರಿಬಿಯನ್ ಪ್ರೀಮಿಯರ್ ಲೀಗ್ ಮತ್ತು ಪಾಕಿಸ್ತಾನ ಸೂಪರ್ ಲೀಗ್‌ನಂತಹ ಇತರ ಕ್ರಿಕೆಟ್ ಆಡುವ ರಾಷ್ಟ್ರಗಳಲ್ಲಿ ದೇಶೀಯ ಟ್ವೆಂಟಿ–20 ಸ್ಪರ್ಧೆಗಳ ವಿಸ್ತರಣೆಗೆ ಈ ಮಾದರಿ ಕಾರಣವಾಗಿದೆ. ಈ ಲೀಗ್‌ಗಳು ಸ್ಥಳೀಯ ಆಟಗಾರರಿಗೆ ಅವಕಾಶ ಒದಗಿಸುವುದಲ್ಲದೆ, ಅಂತರರಾಷ್ಟ್ರೀಯ ಪ್ರತಿಭೆಗಳನ್ನು ಆಕರ್ಷಿಸಿವೆ. ವಿದೇಶಗಳಲ್ಲಿ ಮಾತ್ರವಲ್ಲ – ಈಗ ಊರು, ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯಗಳಲ್ಲಿ ಲೀಗ್ ಮಾದರಿಯಲ್ಲಿ ಟೂರ್ನಿಗಳನ್ನು ನಡೆಸಲಾಗುತ್ತಿದ್ದು, ಆಟಗಾರರಿಗೆ ಹೊಸ ವೇದಿಕೆಗಳು ಸಿಗುತ್ತಿವೆ.

## ಆರ್ಥಿಕ ಕ್ರಾಂತಿ

ದೇಶೀಯ ಟೂರ್ನಿಗಳಲ್ಲಿ ಆಡುತ್ತಿದ್ದ ಕ್ರಿಕೆಟಿಗರು ದಿನಪೂರ್ತಿ ರೈಲಿನಲ್ಲಿ ಪ್ರಯಾಣಿಸಿ ಪಂದ್ಯಗಳು ನಡೆಯುವ ಸ್ಥಳಗಳನ್ನು ತಲುಪಿಕೊಳ್ಳಬೇಕಿತ್ತು. ಕ್ರಮೇಣ ವಿಮಾನದಲ್ಲಿ ಪ್ರಯಾಣಿಸುವ ಅವಕಾಶ ಲಭಿಸಿತು. ಐಪಿಎಲ್ ಆರಂಭವಾದ ಬಳಿಕ ಕ್ರಿಕೆಟ್ ವಾಣಿಜ್ಯೀಕರಣ ಮತ್ತು ಪ್ರಾಯೋಜಕತ್ವದ ಮೂಲಕ ಆಟವನ್ನೂ ಉದ್ಯಮದಂತೆ ನಡೆಸಿಕೊಂಡು ಹೋಗುತ್ತಿದೆ. ಪ್ರತಿ ಪಂದ್ಯಕ್ಕೂ ಮಾರುಕಟ್ಟೆ ವ್ಯವಸ್ಥೆ, ಜಾಹೀರಾತು, ಪ್ರಮುಖ ಬ್ರ್ಯಾಂಡ್‌ಗಳು ಮತ್ತು ಕಂಪನಿಗಳನ್ನು ಲೀಗ್‌ನಲ್ಲಿ ಹೂಡಿಕೆ ಮಾಡಲು ಆಕರ್ಷಿಸುತ್ತದೆ. ವಾಣಿಜ್ಯ ಶಕ್ತಿಕೇಂದ್ರವಾಗಿಯೂ ಮಾರ್ಪಟ್ಟಿದೆ. ವಿವಿಧ ಕೈಗಾರಿಕೆಗಳಿಂದ ಪ್ರಾಯೋಜಕರನ್ನು ಆಕರ್ಷಿಸುತ್ತಿದೆ.

## ದುಬಾರಿ ಆಟಗಾರರ ಮೇಲೆ ನಿರೀಕ್ಷೆ

ಪ್ರತಿ ಐಪಿಎಲ್ ಆವೃತ್ತಿಯೂ ಆಟಗಾರರನ್ನು ತಂಡಗಳು ಖರೀದಿಸುವುದರೊಂದಿಗೆ ಆರಂಭವಾಗುತ್ತದೆ. ಕೆಲವು ಆಟಗಾರರನ್ನು ಖರೀದಿಸಲು ತಂಡಗಳ ನಡುವೆ ಜಿದ್ದಾಜಿದ್ದಿನ ಸ್ಪರ್ಧೆಯೇ ನಡೆಯುತ್ತದೆ. ಹರಾಜಿನಲ್ಲಿ ಹೆಚ್ಚು ಹಣ ಪಡೆಯುವ ಆಟಗಾರರು ಸಹಜವಾಗಿಯೇ ಸುದ್ದಿಯಾಗುತ್ತಾರೆ. ದುಬಾರಿ ಆಟಗಾರರ ಮೇಲೆ ತಂಡಗಳು ಹಾಗೂ ಪ್ರೇಕ್ಷಕರ ನಿರೀಕ್ಷೆಯೂ ಹೆಚ್ಚಾಗಿರುತ್ತದೆ. ಈ ಆವೃತ್ತಿಯಲ್ಲಿ ಹೆಚ್ಚು ಹಣಕ್ಕೆ ಮಾರಾಟವಾಗಿ ನಿರೀಕ್ಷೆ ಹುಟ್ಟಿಸಿರುವ ಕೆಲವು ದುಬಾರಿ ಆಟಗಾರರು ಕೆಳಗಿನಂತಿದ್ದಾರೆ:

### ರಿಷಭ್ ಪಂತ್

ಎರಡು ವರ್ಷಗಳ ಹಿಂದೆ ಭೀಕರ ರಸ್ತೆ ಅಪಘಾತದಲ್ಲಿ ಗಾಯಗೊಂಡು ಮರುಜನ್ಮ ಪಡೆದಿರುವ ವಿಕೆಟ್ ಕೀಪರ್ ರಿಷಭ್ ಪಂತ್ ಹೋದ ವರ್ಷದ ಐಪಿಎಲ್‌ನಿಂದ ಕ್ರಿಕೆಟ್‌ಗೆ ಮರಳಿದ್ದರು. ಟಿ20 ವಿಶ್ವಕಪ್ ಸೇರಿದಂತೆ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಗಮನಾರ್ಹ ಪ್ರದರ್ಶನ ತೋರಿಸಿದ್ದರಿಂದ ಫ್ರಾಂಚೈಸ್‌ಗಳ ನೆಚ್ಚಿನ ಆಟಗಾರ ಎನಿಸಿದರು. ಅವರನ್ನು



ರಿಷಭ್ ಪಂತ್: ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು!

## ಆರ್‌ಸಿಬಿ ಪಾಲಿಗೆ ಟ್ರೋಫಿ ಗಗನಕುಸುಮ

ಕರ್ನಾಟಕದ ಆಟಗಾರರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲದಿದ್ದರೂ ಬೆಂಗಳೂರು ಎನ್ನುವ ಹೆಸರು ಆರ್‌ಸಿಬಿ ಜೊತೆಗಿರುವ ಕಾರಣ ರಾಜ್ಯದ ಕ್ರಿಕೆಟ್ ಪ್ರೇಮಿಗಳಿಗೆ ಇದು ತವರಿನ ತಂಡವಾಗಿದೆ. ಬೇರೆ ತಂಡಗಳಲ್ಲಿ ಸಾಕಷ್ಟು ಆಟಗಾರರು ರಾಜ್ಯದವರು ಇದ್ದರೂ 'ಆರ್‌ಸಿಬಿ ಕಪ್ ಗೆಲ್ಲಬೇಕು' ಎನ್ನುವ ಆಸೆ ಕ್ರೀಡಾಭಿಮಾನಿಗಳದ್ದು.

ಜನರ ಆಸೆ, ಅಪೇಕ್ಷೆ ಅರ್ಥಮಾಡಿಕೊಂಡಂತಿರುವ ಆರ್‌ಸಿಬಿ ತಂಡದ ಆಟಗಾರರು ಪ್ರತಿ ಐಪಿಎಲ್ ಋತುವಿನ ಆರಂಭದಲ್ಲಿ 'ಈ ಸಲ ಕಪ್ ನಮ್ದೇ' ಎನ್ನುವ ಸಿದ್ಧ ಘೋಷವಾಕ್ಯ ಪಠಿಸುತ್ತಾರೆ. ಆದರೆ ಟ್ರೋಫಿ ಮಾತ್ರ ಗಗನಕುಸುಮವಾಗಿದೆ. ಐಪಿಎಲ್ ಆರಂಭವಾಗಿ 17 ವರ್ಷಗಳು ಉರುಳಿದರೂ ಆರ್‌ಸಿಬಿ ತಂಡ ಮೂರು ಬಾರಿ ಫೈನಲ್‌ಗೆ ಬಂದು ಸೋಲು ಕಂಡಿದೆ. ಇತ್ತೀಚೆಗಷ್ಟೇ ಆರಂಭವಾದ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಆರ್‌ಸಿಬಿ ವನಿತೆಯರು ಛಲದ ಆಟ ತೋರಿ 'ಈ ಸಲದ ಕಪ್ ನಮ್ದು' ಎಂದು ಬೀಗಿದ್ದಾರೆ. ಈ ಸಾಧನೆ ಪುರುಷರ ತಂಡದಿಂದ ಸಾಧ್ಯವಾಗುತ್ತಿಲ್ಲ.

ಆರ್‌ಸಿಬಿ 2019ರಲ್ಲಿ ಕೆವಿನ್ ಪೀಟರ್ಸನ್ ನಾಯಕತ್ವದಲ್ಲಿ ರನ್ನರ್ಸ್ ಅಪ್ ಆಗಿತ್ತು. 2011ರಲ್ಲಿ ನ್ಯೂಜಿಲೆಂಡ್‌ನ ಡೇನಿಯಲ್ ವೆಟ್ಟೋರಿ ಮುಂದಾಳತ್ವದಲ್ಲಿ ಫೈನಲ್ ತಲುಪಿ ನಿರಾಸೆ ಅನುಭವಿಸಿತು. ಆಕ್ರಮಣಕಾರಿ ಬ್ಯಾಟ್ಸ್‌ಮನ್ ವಿರಾಟ್ ಕೊಹ್ಲಿ ನಾಯಕತ್ವದಲ್ಲಿ 2016ರಲ್ಲಿ ಫೈನಲ್‌ನಲ್ಲಿ ಸೋಲು ಕಂಡಿತ್ತು. ಟೂರ್ನಿಯಲ್ಲಿ ಒಟ್ಟಾರೆ 258 ಪಂದ್ಯಗಳನ್ನು ಆಡಿರುವ ಆರ್‌ಸಿಬಿ 124 ಪಂದ್ಯಗಳಲ್ಲಿ ಗೆಲುವು ಸಾಧಿಸಿದೆ. 129 ಪಂದ್ಯಗಳಲ್ಲಿ ಸೋತಿದೆ. ಇನ್ನುಳಿದ ಐದು ಹೋರಾಟಗಳಲ್ಲಿ ಫಲಿತಾಂಶ ಬಂದಿಲ್ಲ.

ನಾಯಕನ ಮೇಲೆ ನಿರೀಕ್ಷೆ: ಪ್ರತಿಭಾನ್ವಿತ ಆಟಗಾರ 31 ವರ್ಷದ ರಜತ್ ಪಾಟೀದಾರ್ ಈ ಬಾರಿ ಆರ್‌ಸಿಬಿ ತಂಡವನ್ನು ಮುನ್ನಡೆಸಲಿದ್ದು, 2021ರಲ್ಲಿ ಆರ್‌ಸಿಬಿ ಮೂಲಕವೇ ಐಪಿಎಲ್ ಟೂರ್ನಿಗೆ ಪದಾರ್ಪಣೆ ಮಾಡಿದ್ದರು. ಮಧ್ಯಮ ಕ್ರಮಾಂಕದಲ್ಲಿ ಭರವಸೆಯ ಆಟಗಾರನಾಗಿದ್ದಾರೆ. ಈ ವರ್ಷದ ಟೂರ್ನಿಗಾಗಿ ತಂಡದಲ್ಲಿ ರಿಟೇನ್ ಆದ ಮೂವರು ಆಟಗಾರರಲ್ಲಿ ರಜತ್ ಕೂಡ ಒಬ್ಬರು. ಅವರಿಗೆ ತಂಡವು 11 ಕೋಟಿ ನೀಡಿ ಉಳಿಸಿಕೊಂಡಿದೆ.

ಇವರ ನಾಯಕತ್ವದ ತಂಡದಲ್ಲಿ ವಿರಾಟ್ ಕೊಹ್ಲಿ, ಜಿತೇಶ್ ಶರ್ಮಾ, ದೇವದತ್ ಪಡಿಕ್ಕಲ್, ಸ್ವಸ್ತಿಕ್ ಚಿಕಾರ, ಕೃನಾಲ್ ಪಾಂಡ್ಯ, ಸ್ವಪ್ನಿಲ್ ಸಿಂಗ್, ಟಿಮ್ ಡೇವಿಡ್ ಹೀಗೆ ಅನೇಕ ಹೆಸರಾಂತ ಆಟಗಾರರು ಇದ್ದಾರೆ. ಇವರ ಮೇಲೆ ಚೊಚ್ಚಲ ಟ್ರೋಫಿ ಗೆಲುವಿನ ಕನಸು ನನಸು ಮಾಡುವ ಹೊಣೆಗಾರಿಕೆಯಿದೆ.